# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೮, ಮಾರ್ಚ್, ೨೦೨೬(ಫಾಲ್ಗುಣ, ೨೭, ಶಕವರ್ಷ, ೧೯೪೭)<br>BENGALURU, WEDNESDAY, 18, MARCH, 2026(PHALGUNA, 27, SHAKAVARSHA, 1947) | ನಂ. ೨೧೯<br>No. 219 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಒಂಭತ್ತನೇ ಅಧಿವೇಶನ**

**(ಮುಂದುವರೆದ ಉಪವೇಶನ)**

## ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–08)**

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು 2026ರ ಏಪ್ರಿಲ್, ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪ್ರಕರಣ 10ರ ತಿದ್ದುಪಡಿ.-** ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) 10ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿರುವ ಎರಡನೇ ಪರಂತುಕದ ತರುವಾಯ ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಈ ಅಧಿನಿಯಮದಡಿ ಒಂದು ವರ್ಷಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡಿದ ಪ್ರತಿಯೊಬ್ಬ ದಾಖಲಾದ ವ್ಯಕ್ತಿಯು ಆ ವರ್ಷಕ್ಕಾಗಿ ವಿವರ ಪಟ್ಟಿಕೆಯನ್ನು ಒದಗಿಸಿರುವುದಾಗಿ ಪರಿಭಾವಿಸತಕ್ಕದ್ದು.

ಅಲ್ಲದೆ ಪರಂತು, ಆಯುಕ್ತರು ಅಧಿಸೂಚನೆಯ ಮೂಲಕ ವಿವರ ಪಟ್ಟಿಕೆಯನ್ನು ಒದಗಿಸುವುದರಿಂದ ದಾಖಲಾದ ವ್ಯಕ್ತಿಗಳ ಯಾವುದೇ ವರ್ಗವನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾಂಥ ಷರತ್ತುಗಳು ಮತ್ತು ಸುರಕ್ಷಾಕ್ರಮಗಳಿಗೆ (safeguards) ಒಳಪಟ್ಟು ವಿನಾಯಿತಿಸಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35) ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲೆ ತೆರಿಗೆ ವಿಧಿಸುವುದನ್ನು ಮತ್ತು ಸಂಗ್ರಹಿಸುವುದನ್ನು ಉಪಬಂಧಿಸುವುದು ಹಾಗೂ ನೋಂದಣಿಗಾಗಿ ಅಗತ್ಯವಾದ ಕಾರ್ಯವಿಧಾನಗಳು ಮತ್ತು ನೋಂದಾಯಿತ ವ್ಯಕ್ತಿಗಳು ವಿವರಪಟ್ಟಿಕೆ ಸಲ್ಲಿಸುವುದನ್ನೂ ಸಹ ನಿಯಮಿಸುವುದು.

ಸದರಿ ಅಧಿನಿಯಮದ 10ನೇ ಪ್ರಕರಣದ ಪ್ರಸ್ತುತವಿರುವ ಉಪಬಂಧಗಳಡಿ, ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು ಸಂಬಂಧಪಟ್ಟ ವರ್ಷದಲ್ಲಿ ಸದರಿ ಅಧಿನಿಯಮದಡಿ ನಿಯಮಿಸಲಾದ ಗರಿಷ್ಠ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿಯೂ ಸಹ ನೋಂದಾಯಿತ ವ್ಯಕ್ತಿಯು ವಿವರ ಪಟ್ಟಿಕೆಯನ್ನು ಸಲ್ಲಿಸುವುದು ಅಗತ್ಯವಾಗಿರುತ್ತದೆ. ಇದರಿಂದಾಗಿ ತೆರಿಗೆದಾರರ ಮೇಲೆ ತಪ್ಪಿಸಲಾಗದ ಅನುಸರಣಾ ಹೊರೆಯಾಗುವುದು ಹಾಗೂ ಯಾವುದೇ ಸಂವಾದಿ ರಾಜಸ್ವ ಪ್ರಯೋಜನದ ಹೊರತು, ವಾಣಿಜ್ಯ ತೆರಿಗೆ ಇಲಾಖೆಗೆ ಅನಗತ್ಯ ಆಡಳಿತಾತ್ಮಕ ಪ್ರಕ್ರಿಯೆಯಾಗುವುದು.

ಅನುಸರಣೆಯನ್ನು ಸರಳಗೊಳಿಸುವ, ಪತ್ರವ್ಯವಹಾರವನ್ನು ಕಡಿಮೆಗೊಳಿಸುವ ಮತ್ತು ವ್ಯವಹಾರ ನಡೆಸುವುದನ್ನು ಸುಗಮಗೊಳಿಸುವ ಅನುಕೂಲತೆಗಳನ್ನು ಕಲ್ಪಿಸುವ ದೃಷ್ಟಿಯೊಂದಿಗೆ, ಈ ಅಧಿನಿಯಮದಡಿ ನೋಂದಾಯಿತ ವ್ಯಕ್ತಿಯು ಒಂದು ವರ್ಷಕ್ಕಾಗಿ ಪಾವತಿಸಬಹುದಾದ ತೆರಿಗೆಯನ್ನು ಪಾವತಿಸಿರುವ ಸಂದರ್ಭಗಳಲ್ಲಿ ವಿವರಪಟ್ಟಿಕೆಯನ್ನು ಸಲ್ಲಿಸಿರುವುದಾಗಿ ಪರಿಭಾವಿಸಲು ಪ್ರಸ್ತಾವಿಸಲಾಗಿದೆ. ಮುಂದುವರೆದು, ಆಯುಕ್ತನಿಗೆ ಅಧಿಸೂಚನೆಯ ಮೂಲಕ ನೋಂದಾಯಿತ ವ್ಯಕ್ತಿಗಳ ನಿರ್ದಿಷ್ಟ ವರ್ಗಗಳನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಸುರಕ್ಷಾಕ್ರಮಗಳಿಗೆ ಒಳಪಟ್ಟು ವಿವರ ಪಟ್ಟಿಕೆಯನ್ನು ಸಲ್ಲಿಸುವುದರಿಂದ ವಿನಾಯಿತಿಸಲು ಅಧಿಕಾರ ನೀಡುವುದಕ್ಕಾಗಿಯೂ ಸಹ ಪ್ರಸ್ತಾವಿಸಲಾಗಿದೆ.

ಪ್ರಸ್ತಾವಿತ ತಿದ್ದುಪಡಿಯು ತೆರಿಗೆ ನಿರ್ವಹಣೆಯನ್ನು ಕ್ರಮಬದ್ಧಗೊಳಿಸುವುದು, ಸ್ವಯಂ ಅನುಸರಣೆಯನ್ನು ಸುಧಾರಿಸುವುದು ಹಾಗೂ ಇಲಾಖೆಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಕೆಯನ್ನು ಸಾಧ್ಯಗೊಳಿಸುವುದನ್ನು ಉದ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ**
**(1976ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಉದ್ಧೃತ ಭಾಗ**

**XXX XXX XXX**

**10. ದಾಖಲಾದ ವ್ಯಕ್ತಿಗಳು ತೆರಿಗೆಯನ್ನು ಪಾವತಿಸುವುದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವುದು ಮತ್ತು ಕೆಲವು ದಾಖಲಾದ ವ್ಯಕ್ತಿಗಳ ಸಂದರ್ಭದಲ್ಲಿ ತೆರಿಗೆಯನ್ನು ಕಡಿತಗೊಳಿಸುವುದು.-** (1) ದಾಖಲಾದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ತಾನು ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಕರನಿರ್ಧರಣಾ ಪ್ರಾಧಿಕಾರದ ಮುಂದೆ ತನ್ನ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು.

ಪರಂತು, ನೋಂದಾಯಿಸಬೇಕಾದ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಪಾವತಿ ಉದ್ದೇಶಕ್ಕಾಗಿ, ನೋಂದಣಿ ಮಾಡಿಸಿಕೊಳ್ಳಲು ವಿಫಲನಾದಾಗ್ಯೂ ಕೂಡಾ, ನೋಂದಾಯಿತನಾಗಿರುವುದಾಗಿ ಭಾವಿಸತಕ್ಕದ್ದು.

ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಹೆಸರು ದಾಖಲಾದ ವ್ಯಕ್ತಿಗಳ ನಿರ್ದಿಷ್ಟ ವರ್ಗವು, ಪಾವತಿಸಬೇಕಾದ ತೆರಿಗೆಯನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು, ಹಾಗೆಯೇ ನಿಯಮಿಸಬಹುದಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು.

(2) ದಾಖಲಾದ ವ್ಯಕ್ತಿಗಳು ತಮ್ಮ ದಾಖಲಾತಿ ಪ್ರಮಾಣ ಪತ್ರಗಳಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತಿ ವರ್ಷ ಬಾಕಿ ಇರುವ ತೆರಿಗೆಯ ಮೊಬಲಗನ್ನು-

| | |
|---|---|
| (ಎ) ಯಾವುದೇ ವರ್ಷದ ಪ್ರಾರಂಭಕ್ಕೆ ಮೊದಲು ನೋಂದಾಯಿಸಿಕೊಂಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; | ಆ ವರ್ಷದ 30ನೇ ಏಪ್ರಿಲ್ ಮೊದಲು. |
| (ಬಿ) ಯಾವುದೇ ವರ್ಷದ ಪ್ರಾರಂಭದ ನಂತರ ನೋಂದಾಯಿಸಿಕೊಂಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; | ನೋಂದಣಿ ದಿನಾಂಕದಿಂದ ಒಂದು ತಿಂಗಳ ಒಳಗಾಗಿ. |

- ಸಂದಾಯ ಮಾಡತಕ್ಕದ್ದು.

**XXX XXX XXX**

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**NINTH SESSION**
**(Adjourned Meetings)**

## THE KARNATAKA TAX ON PROFESSION, TRADES, CALLINGS AND EMPLOYMENTS (AMENDMENT) BILL, 2026

**(LA Bill No. 08 of 2026)**

A Bill further to amend the Karnataka Tax on Profession, Trades, Callings and Employments Act, 1976.

Whereas, it is expedient further to amend the Karnataka Tax on Profession, Trades, Callings and Employments Act, 1976 (Karnataka Act 35 of 1976), for the purposes hereinafter appearing;

Be it enacted by Karnataka State Legislature in the Seventy seventh year of the Republic of India as follows.-

**1. Short title and commencement.-** (1) This Act may be called the Karnataka Tax on Profession, Trades, Callings and Employments (Amendment) Act, 2026.

(2) It shall come into force with effect from the first day of April, 2026.

**2. Amendment of section 10.-** In the Karnataka Tax on Profession, Trades, Callings and Employments Act, 1976 (Karnataka Act 35 of 1976), in section 10, in sub-section (1), after the second proviso the following provisos shall be inserted, namely:-

"Provided also that, every enrolled person who has paid the tax payable by him under this Act for a year shall be deemed to have furnished the return for that year.

Provided also that, the Commissioner may, by notification, exempt any class of enrolled persons from furnishing the return, subject to such conditions and safeguards as may be specified in such notification."

## STATEMENT OF OBJECTS AND REASONS

The Karnataka Tax on Professions, Trades, Callings and Employments Act 1976 (Karnataka Act 35 of 1976) provides for levy and collection of tax on professions, trades, callings and employments and also prescribes procedural requirements for enrolment and filing at returns by enrolled persons.

Under the existing provisions of section 10 of the said Act, every enrolled person is required to furnish a return, even in cases where the enrolled person has paid the maximum tax prescribed under the said Act for the relevant year. This has resulted in avoidable compliance burden on taxpayers and unnecessary administrative processing by the Commercial Tax Department, without any corresponding revenue benefit.

With a view to simplifying compliance, reducing paperwork, and facilitating ease of doing business, it is proposed to deem the furnishing of return in cases where an enrolled person has paid the tax payable by him under the Act for a year. Further, it is also proposed to empower the Commissioner to exempt, by notification, specified classes of enrolled persons from furnishing returns, subject to such conditions and safeguards as may be specified in the notification.

Proposed amendment seeks to streamline tax administration, improve voluntary compliance, and enable efficient deployment of departmental resources.

Hence, the Bill.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## FINANCIAL MEMORANDUM

There is no extra expenditure involved in the proposed Legislative measure.

**SIDDARAMAIAH**
Chief Minister and
Minister for Finance

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA TAX ON PROFESSION, TRADES, CALLINGS AND EMPLOYMENTS ACT, 1976 (KARNATAKA ACT 35 OF 1976)

**XXX XXX XXX**

**10. Payment of Tax and filing of return by enrolled persons and deduction of tax in the case of certain enrolled persons.-** (1) Every enrolled person shall pay the tax payable by him under this Act and file his return before the assessing authority, in such manner and such form as may be prescribed.

Provided that, a person liable to be enrolled shall be deemed to have enrolled for the purpose of payment of tax under this Act, notwithstanding that he has failed to do so.

Provided further that, the specified class of enrolled persons as may be notified by the Commissioner shall pay the tax payable, by electronic remittance through internet and also submit the return in the prescribed form, electronically through internet, in the manner specified in the said notification.

(2) The amount of tax due from enrolled persons for each year as specified in their enrolment certificates shall be paid,-

| | | |
|---|---|---|
| (a) | in respect of a person who stands enrolled before the commencement of a year; | Before 30th April of that year |
| (b) | in respect of a person who is enrolled after the commencement of a year. | Within one month from the date of enrolment. |

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH